


# ಸವಿರುಚಿ ಕನ್ನಡ

■ ನೂತನ ದೋಶೆಟ್ಟಿ

'ಕನ್ನಡ ಕನ್ನಡ ಹಾ ಸವಿಗನ್ನಡ ..' ಗೀತೆಯನ್ನು 'ಕನ್ನಡ ಕನ್ನಡ ಹಾ ಸವಿರುಚಿಗನ್ನಡ..' ಎಂದು ಹಾಡುತ್ತ ಆ ಹಾಡಿನಲ್ಲಿ ತಮ್ಮ ಹೋಟೆಲ್‌ನ ತಿಂಡಿ ತಿನಿಸು, ಪಾನೀಯಗಳ ರುಚಿಯನ್ನು ಸೇರಿಸುತ್ತಾರೆ ಉಡುಪಿ ಉತ್ಸವ ಹೋಟೆಲ್‌ನ ಶ್ರೀರಮೇಶ್ ಅವರು. ಅಂದ ಹಾಗೆ ಇದು ಹಾಡಬಹುದಾದ ಕನ್ನಡ  ಹಾಡಲ್ಲ; ತಿಂದು ಸವಿಯಬಹುದಾದ ಕನ್ನಡ ಭಾಷೆಯ ಅಮಿತ ಪ್ರೀತಿ.

ಬೆಂಗಳೂರಿನ ಹೆಬ್ಬಾಳ ಕೆಂಪಾಪುರದ ಭುವನೇಶ್ವರಿ ನಗರ ಕಳೆದ ಹತ್ತು ವರ್ಷಗಳಲ್ಲಿ ಅಚ್ಚರಿಪಡುವಷ್ಟು ಬೆಳೆದಿದ್ದರೂ ಇಲ್ಲಿ ಒಳ್ಳೆಯ ಹೋಟೆಲೊಂದರ ಕೊರತೆ ಇತ್ತು. ಅದನ್ನು ತುಂಬಿ ಕೊಟ್ಟವರು ಉಡುಪಿಯ ಶ್ರೀ ರಮೇಶ್. ಬಹುತೇಕ ಕನ್ನಡಿಗರು ವಾಸಿಸುತ್ತಿರುವ ಭುವನೇಶ್ವರಿ ನಗರದಲ್ಲಿ ಹೋಟೆಲ್ ಆರಂಭಿಸಿದಾಗ ರಮೇಶ್ ಅವರು ರುಚಿ ಶುಚಿಯ ಜೊತೆಗೆ ಕನ್ನಡಕ್ಕೆ ಪ್ರಾಶಸ್ತ್ಯ ಕೊಟ್ಟಿರುವುದು ಬಹಳ ಖುಷಿಯ ವಿಷಯ. ಅಷ್ಟೇ ಅಲ್ಲ ಅವರು ತಮ್ಮ ಹೋಟೆಲ್‌ನಲ್ಲಿ ತಿಂಡಿ, ತಿನಿಸು, ಪಾನೀಯಗಳನ್ನು ಪರಿಚಯಿಸಲು ಕನ್ನಡದ ಜನಪ್ರಿಯ ಸಿನಿಮಾಗಳ ಹೆಸರುಗಳನ್ನು, ಜನಪ್ರಿಯ ಹಾಡಿನ ತುಣುಕನ್ನು ಬಳಸಿ ಕಣ್ಸೆಳೆಯುವಂತೆ ದಪ್ಪ ಅಕ್ಷರಗಳಲ್ಲಿ ಬರೆಸಿರುವುದು ಅವರ ಕನ್ನಡ ಪ್ರೀತಿಯನ್ನು ಹಾಗೂ ಭಾಷೆಯ ಬಗೆಗೆ ಅವರ ಅಭಿರುಚಿಯನ್ನು ತೋರಿಸುತ್ತದೆ.



ಹೊರಗಿನಿಂದ ನೋಡಿದಾಗ ವಿಶೇಷ ಅನ್ನಿಸದ ಉಡುಪಿ ಉತ್ಸವ್ ಒಳಕ್ಕೆ ಹೋದಾಗ ಅಲ್ಲಿನ ಬರಹಗಳಿಂದ ಗಮನ ಸೆಳೆಯುತ್ತದೆ. ಪಾನೀಯಗಳ ಬಗ್ಗೆ ಅವರು ಕೊಡುವ ಶೀರ್ಷಿಕೆ ಚಹಾನುಭೂತಿ, ಸಿಪ್ ಸೂಪ್ ಸಿಪ್, ಕಾಫಿ ಸಮರ.. ಇವುಗಳನ್ನು ಓದುತ್ತಲೇ ಎಲ್ಲರ ಮುಖದ ಮೇಲೂ ಮುಗುಳ್ನಗೆಯೊಂದು ಅರಿವಿಲ್ಲದೇ ಮೂಡುತ್ತದೆ.

ರಸಂ ಖುಷಿ, ಜಸ್ಟ್ ಬಾತ್ಬಾತ್, ಪೂರಿಗಳು ಸಾರ್ ಪೂರಿಗಳು ಎಂಬ ಶೀರ್ಷಿಕೆಗಳು ಕನ್ನಡದ ಕೆಲವು ಹೆಸರಾದ ಚಲನಚಿತ್ರಗಳನ್ನು ನೆನಪಿಸುತ್ತವೆ. ಆರಂಜ್ ಮ್ಯಾರೇಜ್, ಒಲವಿನ ಸೀತಾಫಲ ಎಂದು ಅವರು ಹಣ್ಣಿನ ರಸಗಳನ್ನು ರಮ್ಯವಾಗಿ ಕರೆಯುತ್ತಾರೆ.

ಸೊಪ್ಪಿಗಿಂತ ರುಚಿಯಿಲ್ಲ, ಪ್ರೇಮದಾ ಪಾನೀಪುರಿ, ಪ್ರಚಂಡ ಬಟಾಣಿಗಳು, ಕೋಸಿದ್ರೆ ಕೈಲಾಸ ಎಂಬ ಶೀರ್ಷಿಕೆಗಳು ಉಪ್ಪಿಗಿಂತ ರುಚಿಯಿಲ್ಲ ಎಂಬ ಉಪೇಂದ್ರನ ಹಾಡನ್ನು ನೆನಪಿಸಿದರೆ, ಪ್ರೇಮದಾ ಪಾನೀಪುರಿ ಬಂಧನ ಚಿತ್ರದ ಪ್ರೇಮದಾ ಕಾದಂಬರಿ ಹಾಡನ್ನು ನೆನಪಿಸುತ್ತದೆ. ಎಣ್ಣೆ ನಿನಗೆ ಸಾಟಿ ಇಲ್ಲ (ಎಮ್ಮೆ ನಿನಗೆ ಸಾಟಿ ಇಲ್ಲ), ವಡೆ ಮಗಾ ವಡೆ (ಹೊಡಿ ಮಗಾ), ಅನ್ನ ಒಲವಿನ ಅನ್ನ (ಬಣ್ಣ ಒಲವಿನ ಬಣ್ಣ) ತಿನಿಸು ತರವೇ ಮುಗುದೆ (ಮುನಿಸು ತರವೇ ಮುಗುದೆ) ಮೊದಲಾದ ಅತಿ ಜನಪ್ರಿಯ ಹಾಡುಗಳನ್ನು ತಿಂಡಿಗಳಿಗೆ ಬಳಸಿ ಅಡಿಯಲ್ಲಿ ಸೂಪರ್ ಹಿಟ್ ಎಂಬ ಮತ್ತೊಂದು ಶೀರ್ಷಿಕೆ ಕೊಡುತ್ತಾರೆ. ಇದು ಕಣ್ಣೆರಲ್ವೇ ಪನ್ನೀರು ..ಡಾ ರಾಜಕುಮಾರ್ ಅವರ ಡೈಲಾಗನ್ನು ತಿಂಡಿಗೆ ಬಳಸುವ ಅವರ ಭಾಷಾ ಪ್ರೀತಿ ಹಾಗೂ ಸಾಹಿತ್ಯ ಪ್ರಜ್ಞೆ ಮೆಚ್ಚುವಂಥದು. ಆಸೆಗೊಬ್ಬ ದೋಸೆಗೊಬ್ಬ, ಪ್ರೇಮದ ಕೋಸಂಬರಿ ಮೊದಲಾದ ಶೀರ್ಷಿಕೆಗಳು ಅವರ ಹಾಸ್ಯ ಪ್ರಜ್ಞೆಯನ್ನು ತೋರಿಸುತ್ತವೆ.

ಕನ್ನಡ ಭಾಷೆ ಬೆಂಗಳೂರಿನಲ್ಲಿ ಆತಂಕವನ್ನು ಎದುರಿಸುತ್ತದೆ ಎಂಬ ಮಾತು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ರಮೇಶ್ ಅವರ ಭಾಷಾ ಪ್ರೇಮ, ಅದನ್ನು ಅವರು ಬಳಸಿಕೊಳ್ಳುವಲ್ಲಿ ತೋರುವ ಜಾಣ್ಮೆ ಅನನ್ಯವಾದದ್ದು. ಮಿತಭಾಷಿ ರಮೇಶ್ ಅವರು ಇದರ ಬಗ್ಗೆ ಮಾತಾಡುವಾಗಲೂ ವಿನಮ್ರರಾಗುತ್ತಾರೆ. ಕನ್ನಡ ಭಾಷೆ ದಿನನಿತ್ಯದ ಬಳಕೆಯಲ್ಲಿ ಹೆಚ್ಚು ಹೆಚ್ಚು ಬಂದರೆ ಭಾಷೆಯ ಅಳಿವಿನ ಭಯ ತನ್ನಿಂದ ತಾನೇ ದೂರವಾಗುತ್ತದೆ. ಇದಕ್ಕೆ ಶ್ರೀರಮೇಶ್ ಅವರ ಹೋಟೆಲ್‌ನ ಗೋಡೆ ಬರಹಗಳು ಒಳ್ಳೆಯ ನಿದರ್ಶನ.

(ಸಂಪರ್ಕ: 9449075418)